

ದಿನಾಂಕ: 30–04–2023 ರಂದು ಕರ್ನಾಟಕದ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಕೇರಳದ ಕೊಚ್ಚಿನ ಯರ್ನಾಕುಲಂದಲ್ಲಿ ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, (ಕೆ.ಯು.ಡಬ್ಲ್ಯೂ.ಜಿ) ಹಾಗೂ ಕೊಚ್ಚಿನ್ ಕನ್ನಡ ಸಂಘದ ವತಿಯಿಂದ ಕೊಚ್ಚಿನ ಕನ್ನಡ ಸಂಸ್ಕೃತಿ ಉತ್ಸವ ಸಾಧಕ ಪತ್ರಕರ್ತರಿಗೆ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಧಕ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು ಸೌಹಾರ್ದ ಸಮೃದ್ಧಿ ಸಮಾಜ ಕಟ್ಟುವಲ್ಲಿ ಪತ್ರಿಕಾ ಮಿತ್ರರ ಜಾವಾಬ್ದಾರಿ ದೊಡ್ಡದಿದೆ. ನಾಲ್ಕನೇ ಅಂಗವಾಗಿರುವ ಪತ್ರಿಕಾ ರಂಗದ ಹೊಣೆಗಾರಿಕೆ ಸಹ ಅತ್ಯಂತ ಮಹತ್ವದ್ದು ಎಲ್ಲ ಕ್ಷೇತ್ರವನ್ನು ಸುಧಾರಿಸುವ, ಎಚ್ಚರಿಸುವ, ಕಾರ್ಯ ಪತ್ರಿಕಾರಂಗದಿಂದ ಆಗುತ್ತಿದೆ. ರಂಜಿಸುವ ಸುದ್ದಿಯ ಬದಲು ಅಭಿವೃದ್ಧಿಪರ ಸುದ್ದಿಗಳು ಹೆಚ್ಚು ಬಿತ್ತರವಾಗಬೇಕಾಗಿದೆ. ಇಂದು ಸಾಧಕ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಖುಷಿ ತಂದಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರ ಅಧ್ಯಕ್ಷತೆ ವಹಿಸಿದ್ದರು.



ದಿನಾಂಕ: 30–04–2023 ರಂದು ಕರ್ನಾಟಕದ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಕೇರಳದ ಕೊಟ್ಟಾಯಂ ಜಿಲ್ಲೆಯ ಬಸವಬಳಗದವರು ಏರ್ಪಡಿಸಿದ ಬಸವಜಯಂತಿಯನ್ನು ಉದ್ಘಾಟಿಸಿ ಬಸವಣ್ಣನವರ ಕುರಿತು ಹೊರಡಿಸಿದ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಬಸವಣ್ಣನವರ ಆದರ್ಶಗಳು ಸರ್ವಕಾಲಕ್ಕೂ ಶ್ರೇಷ್ಠ. ಅವರ ಆದರ್ಶಗಳನ್ನು ಚಿಂತನೆಗಳನ್ನು ಸಮಾಜದಲ್ಲಿ ಹಾಗೂ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಸಮ ಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು.